



# ಎಂಜಲ್ ವಿಂಗ್ಸ್

■ ಚಿತ್ರ– ಬರಹ:
ಗೀತಸದಾ ಮೋಂತಿಮಾರು.

ಹೃದಯಾಕಾರದ ಅಗಲವಾದ ಹಸಿರು ಎಲೆಗಳು! ನಡುವೆ ಕೆಂಪು, ಬಿಳಿ, ನೇರಳೆ, ಹಳದಿ ಇತ್ಯಾದಿ ಹಲವಾರು ಬಣ್ಣಗಳಿಂದ ಕೂಡಿದ ಚುಕ್ಕಿಗಳ ಅಪೂರ್ವ ಸಮ್ಮಿಲನ. ಮಧ್ಯಭಾಗದಲ್ಲಿ ಸ್ಪಷ್ಟವಾಗಿ ಎದ್ದು ಕಾಣುವ ಗೆರೆಗಳನ್ನು ಹೊಂದಿರುವ ಈ ಎಲೆಗಳನ್ನು ನೋಡುವುದೇ ಕಣ್ಣಿಗೆ ಅಂದ. ಏಂಜಲ್‌ವಿಂಗ್ಸ್ ಎಂದು ಕರೆಯುವ ಆಕರ್ಷಕವಾದ ಎಲೆಗಳನ್ನು ಹೊಂದಿರುವ ಈ ಗಿಡಗಳು ಹೂವಿನ ತೋಟದ ಮೆರುಗನ್ನು ಹೆಚ್ಚಿಸುತ್ತವೆ. ಕೆಲಾಡಿಯಂ ಹಾರ್ಟುಲೋಮ್ ಎಂಬ ಇನ್ನೊಂದು ಹೆಸರನ್ನು ಹೊಂದಿರುವ ಇವುಗಳು ಹಲವಾರು ನಮೂನೆಗಳಿಂದ ಕೂಡಿದ್ದು ಒಂದಕ್ಕಿಂತ ಒಂದು ವಿಭಿನ್ನವಾಗಿವೆ. ನೋಡಲು ಬಲು ಸುಂದರವಾಗಿದೆ.

ಇವುಗಳಲ್ಲಿ ಕೆಲವು ಜಾತಿಯ ಗಿಡದ ಎಲೆಗಳು ಸುಮಾರು ಒಂದು ಅಡಿ ಉದ್ದ ಬೆಳೆಯುತ್ತವೆ. ಮೃದುವಾಗಿ ದಪ್ಪವಾಗಿದ್ದು ಈ ಎಲೆಗಳ ಕೆಳಭಾಗವು ನಸುನೇರಳೆ ಬಣ್ಣವನ್ನು ಹೊಂದಿರುತ್ತದೆ. ಮೇಲ್ಭಾಗದಲ್ಲಿ ತುಸು ಹಸಿರುಬಣ್ಣ ನಡುವೆ ಆಕರ್ಷಕ ಗೆರೆಗಳಿದ್ದು ವಿಶಿಷ್ಟ ಆಕೃತಿ. ಹೂತೋಟದಲ್ಲಿ ಈ ಎಲೆಯನ್ನು ಕಂಡಾಗ ಚಿಣ್ಣರು ಆಡಿನ ಮುಖವನ್ನು ನೆನಪಿಸುಕೊಳ್ಳುತ್ತಾರೆ.

ಏಂಜಲ್‌ವಿಂಗ್ಸ್‌ನ ಇನ್ನೊಂದು ತಳಿಯಾದ ಫೈರ್ ಚೀಫ್ ಗಿಡದ ಎಲೆಗಳು ಗಾಢ ಕೆಂಪುವರ್ಣದಿಂದ ಕೂಡಿದ್ದು ಅಂಚುಗಳು ಹಸಿರು ಬಣ್ಣ ಹೊಂದಿವೆ. ನಡುವೆ ನರಗಳಂತೆ ಎದ್ದುತೋರುವ ಗೆರೆಗಳನ್ನು ಹೊಂದಿದ್ದು ನೋಡುಗರನ್ನು ತನ್ನತ್ತ ಸೆಳೆಯುತ್ತವೆ. ಕೆಲವು ಗಿಡಗಳಲ್ಲಿಯ ಎಲೆಗಳು ಸಂಪೂರ್ಣ ಕೆಂಪು ಬಣ್ಣದಿಂದ ಕೂಡಿದ್ದರೆ ಕೆಲವು ಎಲೆಗಳಲ್ಲಿ ಹಸಿರು ಹೊದಿಕೆಯ ಮೇಲೆ ಬಿಳಿಯ ಬುಟ್ಟಗಳು, ನಡುವೆ ತುಸು ಎದ್ದು ತೋರುವ ನಸುಕೆಂಪು ಬಣ್ಣದ ಗೆರೆಗಳು.

(12ನೇ ಪುಟ ನೋಡಿ)